ಕಟಕಿಯಾಡಿದರು. ... ಶಿಜು, ಮದುವೆಯಾಗುವ ಇಂಗಿತ ವ್ಯಕ್ತಪಡಿಸಿದ್ದ. ... ಗೊಂಡಿದ್ದ ಶಿಜು, ಶುಕ್ರವಾರ ಸಂಜೆ 5 ಗಂಟೆಯ

# ನಾಲ್ಕು ತಿಂಗಳ ಕಂದಮ್ಮನಿಗೆ ಕಣ್ಣಿನ ಶಸ್ತ್ರಚಿಕಿತ್ಸೆ

**ಬೆಂಗಳೂರು:** ಅದೊಂದು ಅಪರೂಪದ ಹಾಗೂ ಅಷ್ಟೇ ಸೂಕ್ಷ್ಮವಾದ ಶಸ್ತ್ರಚಿಕಿತ್ಸೆ. 4 ತಿಂಗಳ ಹಸುಳೆಗೆ ಕಣ್ಣಿನ ಶಸ್ತ್ರಚಿಕಿತ್ಸೆ!

ಈ ಸೂಕ್ಷ್ಮ ಶಸ್ತ್ರಚಿಕಿತ್ಸೆಯನ್ನು ಬೆಂಗಳೂರಿನ ಸಂಪ್ರತಿ ಕಣ್ಣಿನ ಆಸ್ಪತ್ರೆ ವೈದ್ಯರು ಶನಿವಾರ ಯಶಸ್ವಿಯಾಗಿ ಪೂರೈಸಿದರು. ಅದೂ ಉಚಿತವಾಗಿ.

ಭಾಗ್ಯಲಕ್ಷ್ಮಿ ಅವರ ಮಗುವಿಗೆ ನಾಲ್ಕು ತಿಂಗಳಾದರೂ ಜಗತ್ತಿನ ಬೆಳಕನ್ನು ಸವಿಯಲು ಸಾಧ್ಯವೇ ಆಗಿರಲಿಲ್ಲ. ತಪಾಸಣೆ ನಡೆಸಿದಾಗ ಗೊತ್ತಾಗಿದ್ದು- ಎರಡೂ ಕಣ್ಣುಗಳಿಗೆ ಜನ್ಮತಃ ಕ್ಯಾಟರಾಕ್ಟ್ ಸಮಸ್ಯೆ ಉಂಟಾಗಿತ್ತು.



ಕ್ಯಾಟರಾಕ್ಟ್ ಶಸ್ತ್ರಚಿಕಿತ್ಸೆ ನಡೆಸಿ ಕಣ್ಣಿನಲ್ಲಿ ಬೆಳಕು ಹಾಯುವಂತೆ ಮಾಡುವುದೊಂದೇ ಪರಿಹಾರವಾಗಿತ್ತು.

ಇದು ವೈದ್ಯರಿಗೆ ಸವಾಲಿನ ಕೆಲಸವೂ ಆಗಿತ್ತು. ಪರಿಣಿತ ವೈದ್ಯರು ಮಾತ್ರ ಮಾಡಬಹುದಾಗಿತ್ತು. ಈ ಸವಾಲನ್ನು ಕೈಗೆತ್ತಿಕೊಂಡ ಡಾ. ಅರುಣ್ ಸಂಪ್ರತಿ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ಪೂರೈಸಿದರು. 'ಅದಷ್ಟು ಬೇಗ ಸಮಸ್ಯೆ ಪತ್ತೆಯಾಗಿ, ಶಸ್ತ್ರಚಿಕಿತ್ಸೆ ನಡೆಸಿರುವುದು ಅನುಕೂಲವೇ ಆಯಿತು' ಎಂದು ಡಾ. ಸಂಪ್ರತಿ ಹೇಳಿದ್ದಾರೆ.

ಮಗುವಿನ ಪಾಲಕರು ಬಡತನದಲ್ಲಿರುವುದರಿಂದ ಶಸ್ತ್ರಚಿಕಿತ್ಸೆಯ ಎಲ್ಲ ವೆಚ್ಚವನ್ನು ಆಸ್ಪತ್ರೆಯೇ ಭರಿಸಿದೆ ಎಂದು ಪ್ರಕಟಣೆ ತಿಳಿಸಿದೆ. -ಟಿಎನ್‌ಎನ್

B.M.S.